# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001
ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047
ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in


ಸಂಖ್ಯೆ:ಎಸ್‌ಹೆಚ್‌ಕ್ಯೂ/ 543 /2026-27 ದಿನಾಂಕ : 02.07.2026

ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್,
ಜಿಲ್ಲಾ ಸಂಸ್ಥೆ,
ಕರ್ನಾಟಕ.

**ಮಾನ್ಯರೆ,**

**ವಿಷಯ:- ಜಿಲ್ಲಾ ಮಟ್ಟದ ಪ್ರೇರಣಾ ಕಾರ್ಯಕ್ರಮವನ್ನು ಆಯೋಜಿಸುವ ಕುರಿತು.**

*********

ಪ್ರೇರಣೆಯಿಲ್ಲದೆ ಜಗತ್ತಿನಲ್ಲಿ ಒಂದು ಹುಲ್ಲುಕಡ್ಡಿಯೂ ಅಲುಗಾಡುವುದಿಲ್ಲ ಎಂಬುದು ನೂರಕ್ಕೆ ನೂರರಷ್ಟು ಸತ್ಯ. ಹಾಗೆಯೇ ದೊಡ್ಡದೊಡ್ಡ ಸಾಧನೆಗಳಿಗೆಲ್ಲ, ಸಣ್ಣ ಸಣ್ಣ ಪ್ರೇರಣೆಗಳೆ ಕಾರಣಗಳು, ಪ್ರೇರಣೆ ಇದ್ದರೆ ಬದುಕು ಸುಂದರವಾಗಿರುತ್ತದೆ. ಆದ್ದರಿಂದ ಹೆಣ್ಣು ಮಕ್ಕಳ ದಿನನಿತ್ಯ ಬದುಕಿಗೆ ಅತೀ ಅಗತ್ಯವಾಗಿರುವ ವಿಷಯಗಳನ್ನು ಹೊಂದಿರುವ **ಪ್ರೇರಣಾ ಕಾರ್ಯಕ್ರಮ**ವನ್ನು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳುವ ಮೂಲಕ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸುವುದು.

ಅದರನ್ವಯ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಹಿರಿಯ ಗೈಡ್ಸ್, ರೇಂಜರ್ಸ್ ಹಾಗೂ ರೇಂಜರ್ ಲೀಡರ್ಸ್‌ಗಳಿಗೆ ಜುಲೈ ಮತ್ತು ಆಗಸ್ಟ್ 2026ರ ಮಾಹೆಯೊಳಗಾಗಿ 2 ಅಥವಾ 3 ದಿನಗಳ **ಜಿಲ್ಲಾ ಮಟ್ಟದ ಪ್ರೇರಣಾ ಕಾರ್ಯಕ್ರಮ**ವನ್ನು ಹಮ್ಮಿಕೊಳ್ಳುವುದು ಮತ್ತು ಜಿಲ್ಲಾ ಆಯುಕ್ತರು(ಗೈ) ರವರುಗಳು ತಮ್ಮ ಜಿಲ್ಲಾ ಪದಾಧಿಕಾರಿಗಳ ಸಹಕಾರದೊಂದಿಗೆ ಈ ಶಿಬಿರದ ಜವಾಬ್ದಾರಿಯನ್ನು ತೆಗೆದುಕೊಂಡು ಯಶಸ್ವಿಯಾಗಿ ನಿರ್ವಹಿಸಲು ಕೋರಲಾಗಿದೆ.

ಶಿಬಿರದಲ್ಲಿ ಭಾಗವಹಿಸುವ ಒಬ್ಬ ಶಿಬಿರಾರ್ಥಿಗೆ ಊಟೋಪಚಾರದ ಬಾಬ್ತು ದಿನಕ್ಕೆ ರೂ.150/-ರಂತೆ 3 ದಿನಗಳಿಗೆ ರೂ.450/- ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ ಮತ್ತು ಇತರೆ ನಿರ್ವಹಣೆ ಖರ್ಚು ರೂ.150/- ಹೀಗೆ ಒಟ್ಟು ರೂ.600/-ರಂತೆ ಶಿಬಿರ ಶುಲ್ಕವನ್ನು ಶಿಬಿರಾರ್ಥಿಗಳಿಂದ ಪಡೆಯುವುದು. ಈ ಶುಲ್ಕವನ್ನು ಸಂಬಂಧಪಟ್ಟ ಕಾಲೇಜಿನ ರೋವರ್-ರೇಂಜರ್ ಭರಿಸಲು ತಿಳಿಸುವುದು ಅಥವಾ ದಾನಿಗಳಿಂದ ದೇಣಿಗೆ ಸಂಗ್ರಹಿಸಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಈ ಕಾರ್ಯಕ್ರಮ ನಿರ್ವಹಿಸಬಹುದಾಗಿದೆ. ಈ ಶಿಬಿರದಲ್ಲಿ ಭಾಗವಹಿಸುವ ಪ್ರತಿ ಶಿಬಿರಾರ್ಥಿಗೆ ಪ್ರಮಾಣಪತ್ರ ಹಾಗೂ ಬ್ಯಾಡ್ಜ್‌ನ್ನು ರಾಜ್ಯ ಸಂಸ್ಥೆಯಿಂದ ಕಳುಹಿಸಲಾಗುವುದು.

ಸದರಿ ಶಿಬಿರದಲ್ಲಿ ರಸಪ್ರಶ್ನೆ, ಗುಂಪು ಸಂಭಾಷಣೆ, ಯುವಧ್ವನಿ, ಸಾಧನೆ ಮಾಡಿದ ಮಹಿಳೆಯರ ಜೊತೆ ಸಂವಾದ, ಆರೋಗ್ಯ ಮತ್ತು ಕಾನೂನು ಆಪ್ತ ಸಲಹೆ, ಮಹಿಳಾ ಸುರಕ್ಷತೆ, ಉಪಯುಕ್ತ ಆಟಗಳು, ಮಹಿಳೆಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಿರುವ ಚಟುವಟಿಕೆಗಳು ಹಾಗೂ ಮಾಹಿತಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳುವುದು.

ಶಿಬಿರದ ದಿನಚರಿ, ಕಾರ್ಯಕ್ರಮದ ಮಾರ್ಗಸೂಚಿ- ಗುಂಪು ಸಂವಾದ ಮತ್ತು ಯುವಧ್ವನಿಯ ವಿಷಯಗಳು ಹಾಗೂ ಮುಂತಾದವುಗಳ ಬಗ್ಗೆ ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದ್ದು, ಅದರಂತೆ ಶಿಬಿರದಲ್ಲಿ ಕಾರ್ಯಕ್ರಮ, ಚಟುವಟಿಕೆ ಹಾಗೂ ಕಾರ್ಯಗಾರಗಳನ್ನು ಹಮ್ಮಿಕೊಂಡು ಈ ಪ್ರೇರಣಾ ಶಿಬಿರವನ್ನು ಯಶಸ್ವಿಗೊಳಿಸಿ, ಹೀಗೆ ನಿರ್ವಹಿಸಿದ ಪ್ರೇರಣಾ ಶಿಬಿರದ ವರದಿ ಮತ್ತು ಭಾವಚಿತ್ರಗಳನ್ನು ರಾಜ್ಯ ಸಂಸ್ಥೆಗೆ ಕಳುಹಿಸುವಂತೆ ಕೋರಲಾಗಿದೆ. ಸಂಬಂಧಪಟ್ಟ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಆಹ್ವಾನಿಸುವಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮತ್ತು ಸದರಿ ಪ್ರೇರಣಾ ಕಾರ್ಯಕ್ರಮವನ್ನು ತಮ್ಮ ಜಿಲ್ಲೆಯಲ್ಲಿ ಹಮ್ಮಿಕೊಂಡ ಬಗ್ಗೆ ಕೂಡಲೇ ವರದಿ ಮಾಡಲು ಕೋರಿದೆ.

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

**ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ**

ಪ್ರತಿಯನ್ನು :

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಜಿಲ್ಲಾ ಆಯುಕ್ತರು(ಸ್ಕೌಟ್&ಗೈಡ್), ಭಾ.ಸ್ಕೌ&ಗೈ, ಕರ್ನಾಟಕ
3. ಎ.ಎಸ್.ಒ.ಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ
4. ಕಛೇರಿ ಪ್ರತಿ

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## ಪ್ರೇರಣಾ ಕಾರ್ಯಕ್ರಮ

| ಮೊದಲನೇ ದಿನ | | |
|---|---|---|
| 1 | 8.00 ಬೆಳಗ್ಗೆ | ನೊಂದಾವಣಿ ಹಾಗೂ ಉಪಾಹಾರ |
| 2 | 10.00 ಬೆಳಗ್ಗೆ | ಧ್ವಜಾರೋಹಣ |
| 3 | 10.45 ಬೆಳಗ್ಗೆ | ಕಾರ್ಯಕ್ರಮದ ಪರಿಚಯ |
| 4 | 11.00 ಬೆಳಗ್ಗೆ | ದಿನಚರಿ ಕಾರ್ಯಕ್ರಮ ಹಾಗೂ ಶಿಬಿರದ ನಿಯಮಗಳು |
| 5 | 11.30 ಬೆಳಗ್ಗೆ | ಕಾರ್ಯಕ್ರಮದ ಉದ್ದೇಶಗಳು |
| 6 | 12.00 ಮಧ್ಯಾಹ್ನ | ಗುಂಪು ವಿಂಗಡನೆ, ಸಮವಸ್ತ್ರ ಪರಿಶೀಲನೆ |
| 7 | 12.30 ಮಧ್ಯಾಹ್ನ | ಮೂಲಭೂತ ತತ್ವಗಳು, ಪ್ರಗತಿಪರ ಶಿಕ್ಷಣ ಹಾಗೂ ಪ್ರಶಸ್ತಿ ಮತ್ತು ಬಹುಮಾನಗಳ ಬಗ್ಗೆ ಮಾಹಿತಿ |
| 8 | 1.30 ಮಧ್ಯಾಹ್ನ | ಮಧ್ಯಾಹ್ನದ ಊಟ |
| 9 | 2.30 ಮಧ್ಯಾಹ್ನ | ಪ್ರತಿಜ್ಞೆ ಮತ್ತು ನಿಯಮ |
| 10 | 4.00 ಸಂಜೆ | ಉದ್ಘಾಟನಾ ಸಮಾರಂಭ |
| 11 | 5.00 ಸಂಜೆ | ಉಪಾಹಾರ |
| 12 | 7.00 ಸಂಜೆ | ಶಿಬಿರಾಗ್ನಿ |
| 13 | 8.00 ರಾತ್ರಿ | ರಾತ್ರಿ ಊಟ |
| 14 | 10.00 ರಾತ್ರಿ | ವಿಶ್ರಾಂತಿ |

| ಎರಡನೇ ದಿನ | | |
|---|---|---|
| 1 | 6.30 ಬೆಳಗ್ಗೆ | ಬಿ.ಪಿ. ವ್ಯಾಯಮಗಳು |
| 2 | 7.30 ಬೆಳಗ್ಗೆ | ಶಿಬಿರದ ತಪಾಸಣೆ |
| 3 | 8.00 ಬೆಳಗ್ಗೆ | ಧ್ವಜಾರೋಹಣ |
| 4 | 8.30 ಬೆಳಗ್ಗೆ | ಬೆಳಗಿನ ಉಪಹಾರ |
| 5 | 9.00 ಬೆಳಗ್ಗೆ | ರಸಪ್ರಶ್ನೆ ಸ್ಪರ್ಧೆ (ಸ್ಕೌಟಿಂಗ್-ಗೈಡಿಂಗ್ ಹಾಗೂ ಸಾಮಾನ್ಯ ಜ್ಞಾನದ ವಿಷಯಗಳು) |
| 6 | 10.30 ಬೆಳಗ್ಗೆ | ಪ್ರೇಮ ವಿವಾಹ ಹಾಗೂ ನಿಶ್ಚಿತ ವಿವಾಹದ ಬಗ್ಗೆ ಚರ್ಚೆ |
| 7 | 12.00 ಮಧ್ಯಾಹ್ನ | ಆಪ್ತ ಸಲಹೆ |
| 8 | 1.30 ಮಧ್ಯಾಹ್ನ | ಮಧ್ಯಾಹ್ನದ ಊಟ |
| 9 | 2.00 ಮಧ್ಯಾಹ್ನ | ಯುವಧ್ವನಿ |
| 10 | 3.00 ಸಂಜೆ | ಕಾನೂನಿನ ಸೌಲಭ್ಯಗಳು |
| 11 | 4.00 ಸಂಜೆ | ಸ್ವ- ರಕ್ಷಣೆ |
| 12 | 5.00 ಸಂಜೆ | ಆಟಗಳು |
| 13 | 7.00 ಸಂಜೆ | ಶಿಬಿರಾಗ್ನಿ |
| 13 | 8.00 ರಾತ್ರಿ | ರಾತ್ರಿ ಊಟ |
| 14 | 10.00 ರಾತ್ರಿ | ವಿಶ್ರಾಂತಿ |

| ಮೂರನೇ ದಿನ | | |
|---|---|---|
| 1 | 7.00 ಬೆಳಗ್ಗೆ | ಸರ್ವ ಧರ್ಮ ಪ್ರಾರ್ಥನೆ |
| 2 | 8.00 ಬೆಳಗ್ಗೆ | ಧ್ವಜಾರೋಹಣ |
| 3 | 8.30 ಬೆಳಗ್ಗೆ | ಬೆಳಗಿನ ಉಪಹಾರ |
| 4 | 9.00 ಬೆಳಗ್ಗೆ | ಸಂವಾದ ಕಾರ್ಯಕ್ರಮ |
| 5 | 10.00 ಬೆಳಗ್ಗೆ | ಸಾಧಕ ಮಹಿಳೆ |
| 6 | 11.15 ಬೆಳಗ್ಗೆ | ವಿರಾಮ |
| 7 | 11.30 ಬೆಳಗ್ಗೆ | ತೆರೆದ ಅಧಿವೇಶನ |
| 8 | 12.00 ಮಧ್ಯಾಹ್ನ | ಸಮಾರೋಪ ಸಮಾರಂಭ |
| 9 | 1.30 ಮಧ್ಯಾಹ್ನ | ಧ್ವಜ ಅವರೋಹಣ |
| 10 | 2.00 ಸಂಜೆ | ಮಧ್ಯಾಹದ ಊಟದೊಂದಿಗೆ ಶಿಬಿರ ಮುಕ್ತಾಯ |

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## ಪ್ರೇರಣಾ ಕಾರ್ಯಕ್ರಮಕ್ಕೆ ಮಾರ್ಗಸೂಚಿ

**ದಿನಚರಿಯಲ್ಲಿ ತಿಳಿಸಿರುವ ಮುಖ್ಯ ವಿಷಯಗಳಿಗೆ ಸಂಬಂಧಿಸಿದಂತೆ 3 ರಿಂದ 5 ಅಂಶಗಳನ್ನು ನೀಡಲಾಗಿದ್ದು, ಈ ಅಂಶಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಂಡು ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಕಾರ್ಯಾಗಾರವನ್ನು ಆಯೋಜಿಸುವುದು.**

| | |
|---|---|
| ಸಂಪನ್ಮೂಲ ವ್ಯಕ್ತಿಗಳ ಆಯ್ಕೆ | ಸಂಪನ್ಮೂಲ ವ್ಯಕ್ತಿಗಳು ವಾಗ್ಮಿಗಳಾಗಿರಬೇಕು ಮತ್ತು ರೇಂಜರ್ ವಯಸ್ಸಿನ ಯುವತಿಯರಿಗೆ ಹೆಚ್ಚಿನ ಪ್ರಭಾವ ಮತ್ತು ಪ್ರೋತ್ಸಾಹವನ್ನು ನೀಡುವಂತಿರಬೇಕು. |
| ಆಪ್ತ ಸಲಹೆ | 1. ಹೆಣ್ಣುಮಕ್ಕಳ ಋತು ಚಕ್ರದ ಸಮಸ್ಯೆಗಳ ಬಗ್ಗೆ ಮಾಹಿತಿ<br>2. ಸಾಮಾನ್ಯ ರೋಗಗಳು ಮತ್ತು ನ್ಯೂನತೆಗಳು<br>3. ಮಾನಸಿಕ ಅಸ್ವಸ್ಥತೆ<br>4. ಯೋಗ, ಆಯುರ್ವೇದ, ಪ್ರಕೃತಿ ಚಿಕಿತ್ಸೆ |
| ಕಾನೂನಿನ ಸೌಲಭ್ಯಗಳು | 1. ಗ್ರಾಹಕರ ಹಕ್ಕುಗಳು<br>2. ವಿವಾಹ ವಿಚ್ಛೇದನೆ<br>3. ವೃತ್ತಿಯಲ್ಲಿ ಲೈಂಗಿಕ ಕಿರುಕುಳ<br>4. ಪೋಕ್ಸೋ POCSO(ಲೈಂಗಿಕ ಅಪರಾದಗಳಿಂದ ಮಕ್ಕಳ ಸಂರಕ್ಷಣೆ) ಕುರಿತು ಜಾಗೃತಿ |
| ಸ್ವರಕ್ಷಣೆ | 1. ಕರಾಟೆ<br>2. ಜೂಡೊ<br>3. ಆರಕ್ಷಕರ ಸಹಾಯ ಪಡೆಯುವ ವಿಧಾನಗಳು |
| ಸಾಧಕ ಮಹಿಳೆ | 1. ಶೂನ್ಯದಿಂದ ಸಾಧನೆ ಮಾಡಿದವರ ಬಗ್ಗೆ ಪರಿಚಯ<br>2. ಉನ್ನತ ಹುದ್ದೆಯ ಸಾಧನೆ (ಪೊಲೀಸ್, ಸೈನ್ಯ, ಲಾಯರ್ (ಜಡ್ಜ್)<br>3. ಉದ್ಯಮದಲ್ಲಿ ಸಾಧನೆ (ವಿಜ್ಞಾನಿ, ಸಾಹಿತ್ಯ, ಕಲೆ, ರಾಜಕೀಯ, ಸಾಂಸ್ಕೃತಿಕ) ಜನಪದ ಸಾಹಸ– ಪರ್ವತಾರೋಹಣ, ಚಾರಣ, ಈಜುಗಾರರು, ಅನ್ವೇಷಕರು |
| ಯುವ ಧ್ವನಿ | 1. ಮೊಬೈಲ್ ಬೇಕು! ಅವಶ್ಯಕ ಸಂಪರ್ಕಕ್ಕೆ ಬೇಕು ಅದರಲ್ಲಿ ಸದಾ ಹರಟೆ ಹೊಡೆಯುವುದು ಗೇಮ್ ಆಡುವುದು ಒಳ್ಳೆಯದಲ್ಲ.<br>2. ಕೆಟ್ಟ ಆಕರ್ಷಣೆಗಳಾದ ಲಿಂಗ, ಧೂಮಪಾನ, ಮಾದಕ ದ್ರವ್ಯ ಸೇವನೆ, ವೀಡಿಯೋಗೇಮ್ಸ್ ಇತ್ಯಾದಿ ವ್ಯಸನಗಳಿಗೆ ಒಳಗಾಗಬಾರದು. ಏಕೆ? ನಿರ್ವಹಣಾ ಕ್ರಮಗಳೇನು?<br>3. ಅವರು ದೇಶ ಸೇವೆ ಮಾಡುತ್ತಿದ್ದಾರಾ? ಯಾವ ಯಾವ ರೀತಿಯಲ್ಲಿ ಮಾಡುತ್ತಿದ್ದಾರೆ? ಚರ್ಚಿಸಿ ತೀರ್ಮಾನಿಸುವುದು.<br>4. "ನಮ್ಮ ಆರೋಗ್ಯಕ್ಕೆ ನಾವೇ ಜವಾಬ್ದಾರರು" ಒಪ್ಪುತ್ತಾರಾ? ಚರ್ಚಿಸಿ ದೃಢೀಕರಿಸುವುದು. |

| | |
|---|---|
| | 5. ಕೋಪ, ಹಠ, ದ್ವೇಷ, ಹೊಟ್ಟೆಕಿಚ್ಚು ಚಿಕ್ಕ ವಯಸ್ಸಿನಿಂದಲೇ ತಿದ್ದುಕೊಳ್ಳಬೇಕು? ಮುಂದೆ ಬದುಕು ಚೆನ್ನಾಗಿರುತ್ತದೆ. ಚರ್ಚೆ ಮತ್ತು ತೀರ್ಮಾನ.<br>6. ಶಿಕ್ಷಣ ಎಲ್ಲರಿಗೂ ಬೇಕು. ಏಕೆ ಬೇಕು ಚರ್ಚಿಸಿ ಸಾಧಿಸುವ ಕ್ರಮ |
| ಗುಂಪು ಸಂವಾದ | 1. ಮಹಿಳೆ ಬಹುಮುಖಿ ಕೆಲಸಗಾರಳು<br>2. ರಸ್ತೆ ಅಪಘಾತ ತಡೆಯುವಲ್ಲಿ ರೇಂಜರ್ಸ್ ಪಾತ್ರ<br>3. ಅವರವರ ಆದರ್ಶ ಮಹಿಳೆ ಅಥವಾ ಪುರುಷ<br>4. ಮಹಿಳಾ ಮತ್ತು ಪುರುಷ ಸಮಾನತೆ<br>5. ಪ್ರಕೃತಿಯ ಸಂಪನ್ಮೂಲಗಳ ಬಳಕೆಯಲ್ಲಿ ರೇಂಜರ್ಸ್‌ಗಳ ಪಾತ್ರ |